# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 802 (902) |
| ವಿಧಾನ ಸಭಾ ಸದಸ್ಯರು | ಶ್ರೀ ಶಶಿಲ್ ಜಿ. ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.12.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ರಚನೆಯಾದ ತಾಲ್ಲೂಕುಗಳ ಸಂಖ್ಯೆ ಎಷ್ಟು; ಅವು ಯಾವುದು; (ಜಿಲ್ಲಾವಾರು ಮಾಹಿತಿ ನೀಡುವುದು) | 2018ನೇ ವರ್ಷದಿಂದ ಇದುವರೆಗೆ ರಾಜ್ಯದಲ್ಲಿ 63 ಹೊಸ ತಾಲ್ಲೂಕುಗಳು ರಚನೆಯಾಗಿವೆ. ಹೊಸ ತಾಲ್ಲೂಕುಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಹೊಸದಾಗಿ ರಚನೆಯಾದ ತಾಲ್ಲೂಕುಗಳಿಗೆ ಕಛೇರಿ ಅಧಿಕಾರಿ ಸಿಬ್ಬಂದಿ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಇನ್ನೂ ಯಾವ ಯಾವ ತಾಲ್ಲೂಕುಗಳಿಗೆ ಕಛೇರಿ, ಅಧಿಕಾರಿ, ಸಿಬ್ಬಂದಿ ಹಾಗೂ ಮೂಲಭೂತ ಸೌಕರ್ಯಗಳನ್ನು ನೀಡಿರುವುದಿಲ್ಲ; | ರಾಜ್ಯದಲ್ಲಿ 2017-18ನೇ ಸಾಲಿನಲ್ಲಿ 50 ತಾಲ್ಲೂಕುಗಳನ್ನು ಹಾಗೂ ನಂತರದಲ್ಲಿ 14 ತಾಲ್ಲೂಕುಗಳು ಸೇರಿದಂತೆ ಒಟ್ಟು 64 ಹೊಸ ತಾಲ್ಲೂಕುಗಳನ್ನು ಘೋಷಿಸಲಾಗಿದೆ. ಇವುಗಳಲ್ಲಿ 63 ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಈ ಪೈಕಿ 62 ತಾಲ್ಲೂಕುಗಳಿಗೆ ತಹಸೀಲ್ದಾರ್ ಹುದ್ದೆ ಸೇರಿದಂತೆ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿ, ತಾಲ್ಲೂಕು ಕಚೇರಿಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ. ಇನ್ನುಳಿದ ಒಂದು ತಾಲ್ಲೂಕಿಗೆ ತಹಸೀಲ್ದಾರ್ ಸೇರಿದಂತೆ ಅಗತ್ಯ ಹುದ್ದೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ.<br>ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿ ಕಚೇರಿಗಳನ್ನು ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ.<br>ಮುಂದುವರಿದು, ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 100 ಡಬ್ಲ್ಯೂಬಿಆರ್ 2017, ದಿನಾಂಕ: 31-10-2017 ರನ್ವಯ ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕು ಆಡಳಿತ ಸೌಧ ಕಟ್ಟಡಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಪೀಠೋಪಕರಣ, ಒಳಾಂಗಣ ವಿನ್ಯಾಸ, ವಿದ್ಯುಚ್ಛಕ್ತಿ ಸೌಲಭ್ಯ, ಶೌಚಾಲಯ, ಲಿಫ್ಟ್ ಅಳವಡಿಕೆ ಇನ್ನಿತರೆ ಎಲ್ಲಾ ಪೂರಕ ಸೌಲಭ್ಯಗಳನ್ನು ಒಳಗೊಂಡಂತೆ ರೂ.10.00 ಕೋಟಿಗಳ ಮಿತಿಯೊಳಗೆ ಕಟ್ಟಡ ನಿರ್ಮಾಣ ಮಾಡಲು ಅವಕಾಶವಿದೆ. |
| ಇ) | ಯಾವ ಕಾಲಮಿತಿಯಲ್ಲಿ ಹೊಸ ತಾಲ್ಲೂಕುಗಳಿಗೆ ಬೇಕಾದ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು ಮತ್ತು ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು? | |

| | | |
|---|---|---|
| | | ರಾಜ್ಯದಲ್ಲಿ ಹೊಸದಾಗಿ ರಚನೆಯಾದ 63 ತಾಲ್ಲೂಕುಗಳ ಪೈಕಿ ಯಲಹಂಕ, ಕೆ.ಜಿ.ಎಫ್, ಮೂಡಬಿದಿರೆ ಮತ್ತು ಕಡಬ ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.<br>ಮೂಲ್ಕಿ, ಹೆಬ್ರಿ, ಕಾಪು, ಬೈಂದೂರು, ಕುರುಗೋಡು, ದಾಂಡೇಲಿ, ಬ್ರಹ್ಮಾವರ, ಕಂಪ್ಲಿ, ಬಬಲೇಶ್ವರ ಮತ್ತು ತಿಕೋಟ ತಾಲ್ಲೂಕುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಪ್ರಸ್ತುತ ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿವೆ.<br>ಉಳಿದಂತೆ ನ್ಯಾಮತಿ, ಹನೂರು, ಪೊನ್ನಂಪೇಟೆ, ಕುಶಾಲನಗರ, ಮೂಡಲಗಿ, ಲಕ್ಷ್ಮೇಶ್ವರ, ಗಜೇಂದ್ರಗಡ, ನಿಡಗುಂದಿ, ಕೊಲ್ಹಾರ, ಹುಣಸಗಿ ಮತ್ತು ವಡಗೇರ ತಾಲ್ಲೂಕುಗಳಲ್ಲಿ ಹೊಸ ಮಿನಿ ವಿಧಾನಸೌಧ ಕಟ್ಟಡ ನಿರ್ಮಿಸಲು ಸ್ಥಳ ಗುರುತಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ಪರಿಶೀಲನೆಯಲ್ಲಿವೆ.<br>ಇನ್ನುಳಿದ ತಾಲ್ಲೂಕುಗಳಲ್ಲಿ ಹೊಸದಾಗಿ ಮಿನಿ ವಿಧಾನಸೌಧ ನಿರ್ಮಿಸಲು ಜಾಗ ಗುರುತಿಸಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು. |

**ಸಂಖ್ಯೆ: ಕಂಇ 81 ಎಲ್‌ಆರ್‌ಡಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳ ವಿವರ
## (ದಿನಾಂಕ:1-1-2018 ರಿಂದ ಇದುವರೆಗೆ)

| ಕ್ರ. ಸಂ | ಜಿಲ್ಲೆಯ ಹೆಸರು | ನೂತನವಾಗಿ ರಚಿಸಿರುವ ತಾಲ್ಲೂಕಿನ ಹೆಸರು |
|---|---|---|
| 1. | ಬೆಂಗಳೂರು ನಗರ | ಯಲಹಂಕ |
| 2. | ಕೋಲಾರ | ಕೆ.ಜಿ.ಎಫ್ |
| 3. | ದಾವಣಗೆರೆ | ನ್ಯಾಮತಿ |
| 4. | ರಾಮನಗರ | ಹಾರೋಹಳ್ಳಿ |
| 5. | ಚಿಕ್ಕಬಳ್ಳಾಪುರ | ಚೇಳೂರು |
| 6. | ಚಿಕ್ಕಬಳ್ಳಾಪುರ | ಮಂಚೇನಹಳ್ಳಿ |
| 7. | ಮೈಸೂರು | ಸರಗೂರು |
| 8. | ಮೈಸೂರು | ಸಾಲಿಗ್ರಾಮ |
| 9. | ಚಿಕ್ಕಮಗಳೂರು | ಅಜ್ಜಂಪುರ |
| 10. | ಚಿಕ್ಕಮಗಳೂರು | ಕಳಸಾ |
| 11. | ಚಾಮರಾಜನಗರ | ಹನೂರು |
| 12. | ದಕ್ಷಿಣ ಕನ್ನಡ | ಮೂಡಬಿದಿರೆ |
| 13. | ದಕ್ಷಿಣ ಕನ್ನಡ | ಕಡಬ |
| 14. | ದಕ್ಷಿಣ ಕನ್ನಡ | ಉಳ್ಳಾಲ |
| 15. | ದಕ್ಷಿಣ ಕನ್ನಡ | ಮುಲ್ಕಿ |
| 16. | ಉಡುಪಿ | ಹೆಬ್ರಿ |
| 17. | ಉಡುಪಿ | ಬೈಂದೂರು |
| 18. | ಉಡುಪಿ | ಬ್ರಹ್ಮಾವರ |
| 19. | ಉಡುಪಿ | ಕಾಪು |
| 20. | ಕೊಡಗು | ಪೊನ್ನಂಪೇಟೆ |
| 21. | ಕೊಡಗು | ಕುಶಾಲನಗರ |
| 22. | ಬೆಳಗಾವಿ | ಕಾಗವಾಡ |
| 23. | ಬೆಳಗಾವಿ | ಮೂಡಲಗಿ |
| 24. | ಬೆಳಗಾವಿ | ನಿಪ್ಪಾಣಿ |
| 25. | ಬೆಳಗಾವಿ | ಯರಗಟ್ಟಿ |
| 26. | ಗದಗ | ಲಕ್ಷ್ಮೇಶ್ವರ |
| 27. | ಗದಗ | ಗಜೇಂದ್ರಗಡ |
| 28. | ಧಾರವಾಡ | ಅಳ್ನಾವರ |
| 29. | ಧಾರವಾಡ | ಅಣ್ಣಿಗೇರಿ |
| 30. | ಧಾರವಾಡ | ಹುಬ್ಬಳ್ಳಿ ನಗರ |
| 31. | ಹಾವೇರಿ | ರಟ್ಟೆಹಳ್ಳಿ |
| 32. | ಉತ್ತರ ಕನ್ನಡ | ದಾಂಡೇಲಿ |
| 33. | ಬಾಗಲಕೋಟೆ | ಇಳಕಲ್ |
| 34. | ಬಾಗಲಕೋಟೆ | ರಬಕವಿ-ಬನಹಟ್ಟಿ |
| 35. | ಬಾಗಲಕೋಟೆ | ತೇರದಾಳ |
| 36. | ಬಾಗಲಕೋಟೆ | ಗುಳೇದಗುಡ್ಡ |
| 37. | ವಿಜಯಪುರ | ದೇವರ ಹಿಪ್ಪರಗಿ |
| 38. | ವಿಜಯಪುರ | ತಾಳಿಕೋಟೆ |
| 39. | ವಿಜಯಪುರ | ನಿಡಗುಂದಿ |
| 40. | ವಿಜಯಪುರ | ತಿಕೋಟ |
| 41. | ವಿಜಯಪುರ | ಚಡಚಣ |

| | | |
|---|---|---|
| 42. | ವಿಜಯಪುರ | ಬಬಲೇಶ್ವರ |
| 43. | ವಿಜಯಪುರ | ಕೊಲ್ಹಾರ |
| 44. | ವಿಜಯಪುರ | ಅಲಮೇಲ |
| 45. | ಕಲಬುರಗಿ | ಯಡ್ರಾಮಿ |
| 46. | ಕಲಬುರಗಿ | ಕಮಲಾಪುರ |
| 47. | ಕಲಬುರಗಿ | ಶಹಾಬಾದ್ |
| 48. | ಕಲಬುರಗಿ | ಕಾಳಗಿ |
| 49. | ಬೀದರ್ | ಕಮಲಾನಗರ |
| 50. | ಬೀದರ್ | ಹುಲಸೂರು |
| 51. | ಬೀದರ್ | ಚಿಟಗುಪ್ಪ |
| 52. | ರಾಯಚೂರು | ಮಸ್ಕಿ |
| 53. | ರಾಯಚೂರು | ಸಿರವಾರ |
| 54. | ರಾಯಚೂರು | ಅರಕೇರಾ |
| 55. | ಕೊಪ್ಪಳ | ಕಾರಟಗಿ |
| 56. | ಕೊಪ್ಪಳ | ಕನಕಗಿರಿ |
| 57. | ಕೊಪ್ಪಳ | ಕುಕನೂರು |
| 58. | ಯಾದಗಿರಿ | ಹುಣಸಗಿ |
| 59. | ಯಾದಗಿರಿ | ವಡಗೇರಾ |
| 60. | ಯಾದಗಿರಿ | ಗುರುಮಿಟ್ಕಲ್ |
| 61. | ಬಳ್ಳಾರಿ | ಕೊಟ್ಟೂರು |
| 62. | ಬಳ್ಳಾರಿ | ಕುರುಗೋಡು |
| 63. | ಬಳ್ಳಾರಿ | ಕಂಪ್ಲಿ |